ವಿಮಾ ಕಂಪನಿಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾದ ಕೇಶವ ಕುಡ್ಲ ಅವರು ಕಥೆ ಮತ್ತು ಕಾದಂಬರಿ ಕ್ಷೇತ್ರದಲ್ಲಿ ಕೃಷಿಮಾಡಿದವರು. ಛಾಯಾಗ್ರಹಣ, ಚಾರಣ ಅವರ ಹವ್ಯಾಸ. ತುಳು ಭಾಷೆಯಲ್ಲಿಯೂ ಬರವಣಿಗೆ ಮಾಡಿದ ಅವರಿಗೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ವಾರ್ಷಿಕ ಬಹುಮಾನ ದೊರೆತಿದೆ.

ಅದು ಅಶ್ರಮವೋ ಮಠವೋ ಎಂಬುದೆ ಊರವರಿಗೆ ಸರಿಯಾಗಿ ತಿಳಿವಳಿಕೆ ಇರಲಿಲ್ಲ. ನಿಜಕ್ಕಾದರೆ ಊರೊಟ್ಟಿನ ಜನ ತಮಗಾಗಿ ಒಂದು ಗುರುಪೀಠ ಇದ್ದರೆ ಯಾವುದಕ್ಕೇ ಆದರೂ ಒಂದಷ್ಟು ಬಲ ಬಂದೀತು ಎಂಬ ಉಮೇದಿನಲ್ಲಿ ಒಂದು ಗುರುವನ್ನು ಹೊಂದಲು ನಿರ್ಧರಿಸಿದ್ದರಿಂದ ಆ ಕೇಂದ್ರವು ಅಸ್ತಿತ್ವಕ್ಕೆ ಬಂದಿತ್ತು. ಊರಲ್ಲಿ ಕಾಸುಳ್ಳ ಜಮೀನುದಾರನೊಬ್ಬ ಊರ ಅಂಚಿನಲ್ಲಿದ್ದ ತನ್ನ ಎರಡನೆ ಮನೆಯನ್ನು ಗುರುಪೀಠಕ್ಕೆ ದಾನವಾಗಿ ಕೊಟ್ಟದ್ದರಿಂದ ಆಶ್ರಮವಂತೂ ಅಸ್ತಿತ್ವಕ್ಕೆ ಬಂದಿತ್ತು. ಆದರೆ, ಅಲ್ಲಿ ಇನ್ನೂ ಗುರುವನ್ನು ಪ್ರತಿಷ್ಠಾಪಿಸಲಾಗಿರಲಿಲ್ಲ. ಊರವರ ಅದೃಷ್ಟ ಬಲದಲ್ಲಿ ಗುರು ಸ್ಥಾನಕ್ಕಾಗಿ ಪೀಠದ ಘನತೆಯನ್ನು ಹೆಚ್ಚಿಸಬಲ್ಲಂತಹ ಒಬ್ಬ ಯೋಗ್ಯ ಸಂಪನ್ನ ಯುವಕ ಸಿಕ್ಕಿದ್ದು, ಆತನನ್ನು ಅಯ್ಕೆ ಮಾಡಿದ್ದ ಊರ ಮುಖ್ಯಸ್ಥರು ಆತನನ್ನು ಮತ್ತೊಬ್ಬ ಗುರುವಿನ ಬಳಿ ಧರ್ಮಸೂಕ್ಷ್ಮಗಳನ್ನು ಕಲಿಯಲು ಬಿಟ್ಟು ಬಂದಿದ್ದರು. ಆತ ವಿದ್ಯಾಭ್ಯಾಸ ಮುಗಿಸಿ ಧರ್ಮಜ್ಞಾನಿಯಾಗಿ ಬರಲು ಇನ್ನೂ ಎರಡು ವರ್ಷ ಕಾಲವಿದ್ದುದರಿಂದ ಗುರುವಿಲ್ಲದ ಗುರುಪೀಠದ ಉಸ್ತುವಾರಿ ನೋಡಿಕೊಳ್ಳಲು, ಸಂಸಾರವಿಲ್ಲದೆ ಆಸ್ತಿಪಾಸ್ತಿಯೂ ಇಲ್ಲದೆ ಯಾವುದೋ ಮಠದಲ್ಲಿ ಸೇವೆ ಮಾಡಿಕೊಂಡು ಬದುಕುತ್ತಿದ್ದ ತಮ್ಮ ಊರಿನವನೇ ಆದ ವ್ಯಕ್ತಿಯೊಬ್ಬನನ್ನು ಗುರುಪೀಠದ ವ್ಯವಸ್ಥಾಪಕನನ್ನಾಗಿ ನೇಮಿಸಿದ್ದರು. ರಾಜಪ್ಪ ಎಂಬ ಹೆಸರಿನ ಆ ವ್ಯವಸ್ಥಾಪಕನು ಮಾತ್ರ ಗುರುವಿಲ್ಲದ ಆಶ್ರಮದಲ್ಲಿ ಶ್ವೇತವಸ್ತ್ರಧಾರಿಯಾಗಿ ಉದ್ದ ಕೂದಲು ಮತ್ತು ನೀಳವಾದ ಗಡ್ಡವನ್ನು ಬಿಟ್ಟುಕೊಂಡು ಆಶ್ರಮದಲ್ಲಿ ವಾಸಿಸುತ್ತಾ, ಯಾರಾದರೂ ಅಪರಿಚಿತರು ಬಂದಲ್ಲಿ ತಾನೇ ಗುರುವೇನೋ ಎಂಬ ಭ್ರಮೆ ಹುಟ್ಟಿಸಲು ಯತ್ನಿಸುತ್ತಾ ಇದ್ದನು.

ಆಶ್ರಮಕ್ಕೆ ಒಂದು ದೇವರು ಬೇಕು, ದೇವರಿಗೊಂದು ದೇವಾಲಯ ಬೇಕು, ಆ ದೇವಾಲಯಕ್ಕೆ ಒಂದು ಊರ ಜಾತ್ರೆ ಆಗಬೇಕು. ಇದೆಲ್ಲಕ್ಕೆ ಶಿಷ್ಯರು ಕಾಣಿಕೆ ಕೊಡಬೇಕು ಎಂದು ಎಷ್ಟೇ ಕೇಳಿಕೊಂಡರೂ ಗುರು ಬರುವವರೆಗೂ ಶಿಷ್ಯರ ಪ್ರಶ್ನೆಯೂ ಉದ್ಭವಿಸದು ಎಂಬ ನಿರಾಸಕ್ತಿಯಲ್ಲಿದ್ದ ಊರವರು ಯಾರೂ ಉದಾರ ದೇಣಿಗೆ ನೀಡದ ಕಾರಣ ರಾಜಪ್ಪನ ಯಾವ ಆಸೆಗಳೂ ವಾಸ್ತವಕ್ಕಿಳಿಯುವ ಸಂಭವ ಕಾಣುತ್ತಿರಲಿಲ್ಲ. ಆದರೂ ಆತ ಹೊರಗೆ ಕಾಣಿಸಿಕೊಂಡಾಗ ಗುರುಪೀಠದ ಪ್ರತಿನಿಧಿ ಎಂಬ ಭಾವನೆಯಲ್ಲಿ ಊರವರು ಕೈಮುಗಿದು ಪಕ್ಕಕ್ಕೆ ಸರಿಯುತ್ತಿದ್ದರು. ಆಶ್ರಮದ ಕಡೆ ಬರುತ್ತಿದ್ದ ಕೆಲವು ಗ್ರಾಮಸ್ಥರು ರಾಜಪ್ಪನನ್ನೆ ಗೌರವಿಸುತ್ತಾ ಆತ ತನ್ನ ದೈನಂದಿನ ಪೂಜೆಗಾಗಿ ಇರಿಸಿದ್ದ ದೇವರಿಗೆ ಒಂದಷ್ಟು ಕಾಣಿಕೆ ಹಾಕುತ್ತಾ ಕೈ ಮುಗಿದು ಹೋಗುತ್ತಿದ್ದುದು ಕೂಡ ರಾಜಪ್ಪನ ಆದಾಯ ಮೂಲವಾಗಿತ್ತು. ಅದಲ್ಲದೆ ತನ್ನ ಜೀವನಕ್ಕೆ ಮತ್ತು ಆಶ್ರಮದ ನಿರ್ವಹಣೆಗೆ ಬೇಕಾದಷ್ಟೆ ಹಣ ಊರೊಟ್ಟಿನಿಂದ ಹೇಗೂ ಅಲಾಯಿದ ಬರುತ್ತಿದ್ದುದರಿಂದ ರಾಜಪ್ಪನು ತನ್ನ ಜೀವನಕ್ಕೆ ದಾರಿಯಾಯ್ತಲ್ಲ ಎಂದು ಸುಮ್ಮನಾಗಿದ್ದನು. ಊರ ಜನರು ಕೊಡುತ್ತಿದ್ದ ಗೌರವದಿಂದಾಗಿ ನಿಧಾನಕ್ಕೆ ರಾಜಪ್ಪನ ವ್ಯಕ್ತಿತ್ವಕ್ಕೊಂದು ಮೆರುಗು ಬರಲಾರಂಭಿಸಿತು ಮತ್ತು ಆತನು ಊರವರ ಕಣ್ಣಲ್ಲಿ ಸತ್ಪುರುಷನಾಗಿ ಕಾಣಿಸಿಕೊಳ್ಳುವ ಪ್ರಯತ್ನವನ್ನು ಮುಂದುವರೆಸಿದ್ದ.

ಇಂತಹ ಜಾಗಕ್ಕೆ ಕಸ ಗುಡಿಸಲು ಒಂದು ಜನ ಬೇಕೆಂದು ಅವನಿಗೆ ಒಮ್ಮೆ ಅನ್ನಿಸತೊಡಗಿತು. ಅವನು ಅದನ್ನು ಪಂಚಾಯ್ತಿ ಅಧ್ಯಕ್ಷರಿಗೆ ಹೇಳಲಾಗಿ, ಅವರು ಕಾರ್ಯದರ್ಶಿಗೆ ಹೇಳಲಾಗಿ, ಆತನು ರಾಮಕ್ಕನ ಗೆಳತಿಗೆ ಹೇಳಲಾಗಿ, ಆಕೆಯು ರಾಮಕ್ಕನಿಗೆ ಹೇಳಲಾಗಿ, ಇದೀಗ ರಾಮಕ್ಕನು ಪಂಚಾಯ್ತಿ ಸೆಕ್ರೆಟರಿಯ ಹಾದಿ ಕಾಯುತ್ತಾ ನಿಂತಿದ್ದಳು. ಸೆಕ್ರೆಟರಿಯು ರಾಮಕ್ಕ ನನ್ನು ಕರೆದುಕೊಂಡು ಹೋಗಿ ರಾಜಪ್ಪನಿಗೆ ಪರಿಚಯಿಸಿ ಹೊರಟು ಹೋದ. ಹೀಗೆ ರಾಮಕ್ಕನು ಬಯಸುತ್ತಿದ್ದಂತಹ ಒಂದು 'ಪಾರ್ಟು ಟೈಮು' ಕೆಲಸವು ಸಿಕ್ಕಿತ್ತು.

ಬೆಳಗ್ಗೆ ಸಂಜೆ ಆಶ್ರಮದ ಒಳಹೊರಗೆ ಕಸ ತೆಗೆಯುವ ಕೆಲಸಕ್ಕೆ ರಾಜಪ್ಪನು ತಿಂಗಳಿಗೆ ಎರಡು